12. ಸಂಚಾರ ಕಾಯ್ದೆ ಹಾಗೂ ಸಂಚಾರ ನಿಯಮಗಳ ಪಾಲನೆ ಬಗ್ಗೆ ನಗರದ ಸಾರ್ವಜನಿಕರುಗಳಿಗೆ ಕರ ಪತ್ರಗಳನ್ನು ಪ್ರಕಟಿಸಿ ಹಂಚಲಾಗುತ್ತಿದೆ.

13. ಮುಖ್ಯವಾದ ವೃತ್ತಗಳಲ್ಲಿ ಸಿಗ್ನಲೀಕರಣಗೊಳಿಸುವ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತದೆ. ಇನ್ನು ಕೆಲವು ಮುಖ್ಯವಾದ ವೃತ್ತಗಳಲ್ಲಿ ಹಂತ ಹಂತವಾಗಿ ಸಿಗ್ನಲೀಕರಣಗೊಳಿಸಲಾಗುತ್ತಿದೆ.

14. ಕೆಲವು ಮುಖ್ಯವಾದ ರಸ್ತೆಗಳಲ್ಲಿ ರಸ್ತೆಯನ್ನು ರಸ್ತೆಯ ಪ್ರತಿಫಲಕ ತುಂಡುಗಳನ್ನು ಮತ್ತು ಉಕ್ಕಿನ ಬೆಲೆಗಳನ್ನು ನಿರ್ಮಿಸಿ ರಸ್ತೆಯ ಮಧ್ಯದಲ್ಲಿ ರಸ್ತೆಯ ಡಿವೈಡರ್ಸ್‌ಗಳನ್ನು ಕೊಡುಗೆದಾರರುಗಳಿಂದ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯವರಿಂದ ಅಳವಡಿಸಿ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ಬೇಲಿಗಳನ್ನು ನಿರ್ಮಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿ ಕೊಡಲಾಗುತ್ತಿದೆ.

ಇ) 1) ಅಪಘಾತವಾದ ವ್ಯಕ್ತಿಗೆ ಚಿಕಿತ್ಸೆ ನೀಡಲು ಬೆಂಗಳೂರು ಮಹಾನಗರ ಸಂಚಾರ ವಿಭಾಗದಲ್ಲಿ 5 ಆಕ್ಸಿಡೆಂಟ್ ರಿಲೀಫ್ ವಾಹನಗಳು ಇದ್ದು, ಅವುಗಳು ಅಪಘಾತವಾದ ವ್ಯಕ್ತಿಯನ್ನು ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ಒಯ್ಯಲು ದಿನನಿತ್ಯವು ಶ್ರಮಿಸುತ್ತಿವೆ.

2) ಗಾಯಗೊಂಡ ವ್ಯಕ್ತಿಗಳಿಗೆ ಜರೂರು ಚಿಕಿತ್ಸೆ ನೀಡಲು ಬೆಂಗಳೂರು ನಗರದ ಕೆಲವೊಂದು ಮುಖ್ಯವಾದ ಖಾಸಗಿ ಆಸ್ಪತ್ರೆಗಳನ್ನು ಗುರ್ತಿಸಿ ಸಂಬಂಧಪಟ್ಟ ವೈದ್ಯಾಧಿಕಾರಿಗಳನ್ನು ಕರೆಯಿಸಿ, ಸ್ಪಂಧನ ಕಾರ್ಯಕ್ರಮ ಏರ್ಪಡಿಸಿ, ಅವರುಗಳಿಗೆ ರಸ್ತೆ ಅಪಘಾತಗಳಲ್ಲಿ ಗಾಯಗೊಂಡ ಗಾಯಳುಗಳಿಗೆ ತುರ್ತು ಚಿಕಿತ್ಸೆ ನೀಡುವಂತೆಯೂ ಮತ್ತು ಅಧೀನದಲ್ಲಿರುವ ತುರ್ತು ಚಿಕಿತ್ಸಾ ವಾಹನಗಳನ್ನು ತಕ್ಷಣವೇ ಅಪಘಾತ ನಡೆದ ಸ್ಥಳಕ್ಕೆ ಕಳುಹಿಸಿ, ಗಾಯಾಳುಗಳಿಗೆ ಚಿಕಿತ್ಸೆ ನೀಡಲು ಕೋರಲಾಗಿದೆ.

3) ಇತ್ತೀಚೆಗೆ ಸುಪ್ರೀಂ ಕೋರ್ಟ ನ್ಯಾಯಾಲಯವು ಅಪಘಾತದ ಪ್ರಕರಣಗಳಲ್ಲಿ ಗಾಯಗೊಂಡ ವ್ಯಕ್ತಿಯನ್ನು ಖಾಸಗಿ ಆಸ್ಪತ್ರೆಯ ವೈದ್ಯರೂ ಸಹ ಚಿಕಿತ್ಸೆಕೊಡಬಹುದೆಂದು ಹೇಳಿದ್ದು ಇರುತ್ತದೆ. ಆದ್ದರಿಂದ ಎಲ್ಲಾ ಖಾಸಗಿ ಆಸ್ಪತ್ರೆಗಯ ವೈದ್ಯರಿಗೆ ಅಪಘಾತದ ಪ್ರಕರಣಗಳಲ್ಲಿ ಗಾಯಗೊಂಡ ವ್ಯಕ್ತಿಗಳನ್ನು ಚಿಕಿತ್ಸೆಕೊಡಲು ಕಾನೂನುನ ಸಮ್ಮತಿ ಇದ್ದುದ್ದರಿಂದ, ಖಾಸಗಿ ಆಸ್ಪತ್ರೆಗಳಿಗೆ, ಗಾಯಾಳುಗಳನ್ನು ಸಾಗಿಸಿ ಚಿಕಿತ್ಸೆ ಕೊಡಿಸಹುದು. ಇದರ ಬಗ್ಗೆ ಪ್ರಧಾನ ಕಛೇರಿಯಿಂದ ಸ್ಥಾಯಿ ಆದೇಶ ಹೊರಡಿಸಲಾಗಿದೆ.

ನೌಕರರ ವೈದ್ಯಕೀಯ ವೆಚ್ಚದ ಮರುಪಾವತಿ

258 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವೈದ್ಯಕೀಯ ವೆಚ್ಚದ ಮರುಪಾವತಿ ಕೋರಿ ಕಳೆದ 3 ತಿಂಗಳುಗಳಲ್ಲಿ ಅರ್ಜಿ ಸಲ್ಲಿಸಿದ ಸಚಿವಾಲಯದ ನೌಕರರ ಸಂಖ್ಯೆ ಎಷ್ಟು?*

ಆ) *ಸದರಿ ಬಿಲ್ಲುಗಳು ಮರುಪಾವತಿಯಾಗಿದೆಯೇ ಆಗದಿದ್ದ ಬಿಲ್ಲುಗಳನ್ನು ಇನ್ನು ಒಂದು ವಾರದಲ್ಲಿ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?*

ಇ) *ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ತುರ್ತು ಎಂದು ಪರಿಗಣಿಸುವಂತೆ ಸರ್ಕಾರಿ ಆದೇಶ ಹೊರಡಿಸಲಾಗುವುದೇ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಅ) ಗ್ರೂಪ್ - ಎ 016

ಆ) ಗ್ರೂಪ್ - ಬಿ 052

ಇ) ಗ್ರೂಪ್ - ಸಿ 165

ಈ) ಗ್ರೂಪ್ - ಡಿ 095

ಆ) ಅ) ಗ್ರೂಪ್-ಎ-16 ಪ್ರಕರಣಗಳಲ್ಲಿ 15 ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಉಳಿದ ಒಂದು ಪ್ರಕರಣದ ಬಗ್ಗೆ ಮಾಹಿತಿಯನ್ನು ಪಡೆದ ನಂತರ ಇತ್ಯರ್ಥ ಗೊಳಿಸಲಾಗುವುದು.

ಆ) ಗ್ರೂಪ್-ಬಿ-52 ಪ್ರಕರಣಗಳಲ್ಲಿ 46 ಪ್ರಕರಣಗಳನ್ನು ಇತ್ಯರ್ಥಪಡಿಸಿ ಉಳಿದ 6 ಪ್ರಕರಣಗಳಲ್ಲಿ ಕೋರಿರುವ ಮಾಹಿತಿ ಬಂದ ನಂತರ ಇತ್ಯರ್ಥ ಗೊಳಿಸಲಾಗುವುದು.

ಇ) ಗ್ರೂಪ್-ಸಿ-ಸ್ವೀಕರಿಸಲಾದ 165 ಪ್ರಕರಣಗಳಲ್ಲಿ 163 ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಉಳಿದ 2 ಪ್ರಕರಣಗಳಲ್ಲಿ ಕೋರಲಾದ ಮಾಹಿತಿ ಬಂದ ನಂತರ ಇತ್ಯರ್ಥಗೊಳಿಸಲಾಗುವುದು.

ಈ) ಗ್ರೂಪ್-ಡಿ-ಸ್ವೀಕರಿಸಲಾದ 95 ಪ್ರಕರಣಗಳಲ್ಲಿ 90 ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಉಳಿದ 5 ಪ್ರಕರಣಗಳಲ್ಲಿ ಕೋರಲಾದ ಮಾಹಿತಿ ಬಂದ ನಂತರ ಇತ್ಯರ್ಥಗೊಳಿಸಲಾಗುವುದು.

ಇ) ಪರಿಷ್ಕೃತ ಸಚಿವಾಲಯದ ಕೈಪಿಡಿಯಲ್ಲಿ ಬಾಕಿ ಇರುವ ಎಲ್ಲಾ ರೀತಿಯ ಪ್ರಕರಣಗಳ ಶೀಘ್ರ ವಿಲೇವಾರಿಯನ್ನು ಗಮನಿಸಲು ಹಾಗೂ ಬಾಕಿ ಇರುವ ಪ್ರಕರಣಗಳ ಶೇಖರಣೆಯನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ನಿಗಧಿಪಡಿಸಲಾಗಿದೆ. ಇದರಿಂದಾಗಿ ವೈದ್ಯಕೀಯ ಬಿಲ್ಲುಗಳನ್ನು 'ತುರ್ತು' ಎಂದು ಪರಿಗಣಿಸುವ ಬಗ್ಗೆ ಪ್ರತ್ಯೇಕ ಸರ್ಕಾರಿ ಆದೇಶವನ್ನು ಹೊರಡಿಸುವ ಅಗತ್ಯವಿಲ್ಲ.